# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಕರ್ನಾಟಕ ಪಂ. ರಾಜ್ ಆಯುಕ್ತಾಲಯ ಸ್ಥಾಪಿಸುವ ಬಗ್ಗೆ.

ಓದಲಾಗಿದೆ.

1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ. ರಾಜ ಅಧಿನಿಯಮ 1993 ರ ಪ್ರಕರಣ 232 A.
2. ಕರ್ನಾಟಕ ರಾಜ್ಯದ 2020-21 ನೇ ಸಾಲಿನ ಆಯವ್ಯಯ ಭಾಷಣಕ ಕಂಡಿಕೆ 146.
3. ಸರ್ಕಾರದ ಆದೇಶ ಸಂಖ್ಯೆ: RDPR 52 GPS 2020 ಬೆಂಗಳೂರು ದಿನಾಂಕ: 07.05.2020.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 469 ಗ್ರಾಪಂಆ 2020 04.06.2020. ಹಾಗೂ 12.06.2020.
5. ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 96 ಆರ್ಐ 2020 ದಿನಾಂಕ: 26.06.2020.
6. ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಗ್ರಾಅಪ 96 ಆರ್ಐ 2020 ದಿನಾಂಕ: 26.06.2020.
7. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಪಿ 285 ವಿಸೇಬಿ 99 ಬೆಂಗಳೂರು ದಿನಾಂಕ: 18.03.2000.
8. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 202 ಕೆಎಸ್ಎಸ್ 2009 ಬೆಂಗಳೂರು ದಿನಾಂಕ: 26.11.2010.
9. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 179 ಕೆಎಸ್ಎಸ್ 2007 (1) (2) ಬೆಂಗಳೂರು ದಿನಾಂಕ: 22.08.2007.
10. ಕೆಪಿಎಲ್ಆರ್‌ಸಿ/ಡಿಆರ್‌ಡಿಎ 7/2020/ ಡಿಡಿ-2 (Comp No. 390360).

ಪ್ರಸ್ತಾವನೆ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ರಾಜ್ಯಾದ್ಯಂತ ಕಾರ್ಯಕ್ಷೇತ್ರವನ್ನು ಹೊಂದಿದು, ಗ್ರಾಮೀಣ ಜನತೆಯ ಶ್ರೇಯೋಭಿವೃದ್ಧಿಗೆ ಹಾಗೂ ಮೂಲ ಸೌಕರ್ಯಗಳನ್ನು ಒದಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನಗಳು/ ಕಾರ್ಯಕ್ರಮಗಳ ಅನುಷ್ಠಾನದ ಜವಾಬ್ದಾರಿ ನಿರ್ವಹಿಸುತ್ತಿದೆ. ಸಂವಿಧಾನದ 73ನೇ ತಿದ್ದುಪಡಿ ಅನುಸಾರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರಡಿ 30 ಜಿಲ್ಲಾ ಪಂಚಾಯಿತಿಗಳು, 226 ತಾಲ್ಲೂಕು ಪಂಚಾಯಿತಿಗಳು ಹಾಗೂ 6012 ಗ್ರಾಮ ಪಂಚಾಯಿತಿಗಳು ಅಸ್ತಿತ್ವದಲ್ಲಿದ್ದು, ಅಧಿಕಾರ ವಿಕೇಂದ್ರೀಕರಣ ನೀತಿಯಿಂದಾಗಿ ವಿವಿಧ ಇಲಾಖೆಗಳ 29 ವಿಷಯಗಳನ್ನು ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲಾಗಿರುತ್ತದೆ.

ಮೇಲೆ ಒದಲಾದ ಕ್ರಮ ಸಂಖ್ಯೆ (1) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ಪ್ರಕರಣ 232-ಎ ರಲ್ಲಿ ಪಂಚಾಯತ್ ರಾಜ್ ಆಯುಕ್ತಾಲಯ ಸ್ಥಾಪನೆ ಬಗ್ಗೆ ಇರುವ ಉಪಬಂಧದಲ್ಲಿ ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಸುಗಮವಾಗಿ ಕಾರ್ಯನಿರ್ವಹಿಸಲು ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಪಂಚಾಯತ್ ರಾಜ್ ಸೇವೆಗಳಿಗೆಂದು ಸರ್ಕಾರವು ಆಯುಕ್ತಾಲಯ ಸ್ಥಾಪಿಸತಕ್ಕದ್ದು. ಅದರ ಅಧಿಕಾರಿಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು ಹಾಗೂ ಹುದ್ದೆಗಳ ಪ್ರವರ್ಗಗಳ ಸಂಖ್ಯೆ, ನೇಮಕಾತಿ ವಿಧಾನ, ಕನಿಷ್ಠ ಅರ್ಹತೆ ಇವುಗಳು ನಿಯಮಿಸಬಹುದಾದಂತೆ ಇರತಕ್ಕದ್ದು ಎಂದಿರುತ್ತದೆ.

ಮೇಲೆ ಒದಲಾದ ಕ್ರಮ ಸಂಖ್ಯೆ (2) ರಲ್ಲಿ 2020-21ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ ಮಾಡುವುದರಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಮಾದರಿ ರಾಜ್ಯವಾಗಿರುತ್ತದೆಂದು, ವಿಕೇಂದ್ರೀಕರಣ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು 2020-21ನೇ ಸಾಲಿನಿಂದ ಪಂಚಾಯತ್ ರಾಜ್ ಆಯುಕ್ತಾಲಯ ಸ್ಥಾಪಿಸಲಾಗುವುದು ಎಂದು ಘೋಷಿಸಿರುತ್ತಾರೆ.

ರಾಜ್ಯದ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಹಾಗೂ ಗ್ರಾಮ ಪಂಚಾಯಿತಿಗಳು ಸ್ಥಳೀಯ ಸ್ವಯಂ ಸರ್ಕಾರದಂತೆ ಕಾರ್ಯನಿರ್ವಹಿಸಲು ಅವಶ್ಯವಿರುವ ಸಂಪನ್ಮೂಲ ಸಂಗ್ರಹ, ಸಿಬ್ಬಂದಿ ವ್ಯವಸ್ಥೆ ಮತ್ತು ಯೋಜನೆಗಳ ಅನುಷ್ಠಾನದ ಮೂಲಕ ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸಲು ಅವಶ್ಯವಿರುವ ಬೆಂಬಲ, ಮೇಲ್ವಿಚಾರಣೆ ಮತ್ತು ಪರಿವೀಕ್ಷಣೆ

ಮಾಡಲು ಒಟ್ಟಾರೆ ಪಂಚಾಯತ್ ರಾಜ್ ಕಾಯಿದೆಯ ಆಶಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು, ಪ್ರತ್ಯೇಕ ಆಯುಕ್ತಾಲಯ ಸ್ಥಾಪನೆಯಿಂದ ಅನುಕೂಲವಾಗಲಿದೆ.

ಈ ಹಿನ್ನಲೆಯಲ್ಲಿ ಮೇಲೆ ಓದಲಾಗಿರುವ 3ನೇ ಸರ್ಕಾರಿ ಆದೇಶದಲ್ಲಿ ಪಂಚಾಯತ್ ರಾಜ್ ಆಯುಕ್ತಾಲಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಾಪಿಸಿದೆ ಹಾಗೂ JAG ಕಡಿಮೆ ಇಲ್ಲದ IAS ದರ್ಜೆಯ ಆಯುಕ್ತರ ಹುದ್ದೆಯನ್ನು ವೇತನ ಶ್ರೇಣಿ ರೂ.78800-209200 ಯಲ್ಲಿ ಸೃಜಿಸಿ ಆದೇಶಿಸಲಾಗಿದೆ. ಓದಲಾದ 4ನೇ ಸರ್ಕಾರಿ ಆದೇಶದಲ್ಲಿ ಒಟ್ಟು 83 ಹುದ್ದೆಗಳನ್ನು ಹಾಗೂ ಸದರಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ಸಮೇತ ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ವರ್ಗಾಹಿಸಲಾಗಿದೆ. (ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ, ಕರ್ನಾಟಕ ವಿಕಾಸಕ್ಕೆ ಮಂಜೂರಾಗಿರುವ 54 ಹುದ್ದೆಗಳು, ಸ್ವಉದ್ಯೋಗ ಕಾರ್ಯಕ್ರಮ ಶಾಖೆ 19 ಹುದ್ದೆಗಳು ಹಾಗೂ ಜೈವಿಕ ಇಂಧನ ಕಾರ್ಯಕ್ರಮ ಶಾಖೆ 09 ಹುದ್ದೆಗಳು). ಮೇಲೆ ಓದಲಾಗಿರುವ 5ನೇ ಸರ್ಕಾರಿ ಆದೇಶ ಹಾಗೂ 6ನೇ ಅಧಿಕೃತ ಜ್ಞಾಪನಾದಲ್ಲಿ ಅಧಿಕಾರಿ ಹಾಗೂ ನೌಕರರನ್ನು ಪಂಚಾಯತ್ ರಾಜ್ ಆಯುಕ್ತಾಲಯಕ್ಕೆ ಸ್ಥಳಾಂತರಿಸಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ:7,8 ಮತ್ತು 9 ರಲ್ಲಿ ಜಿಲ್ಲಾ ಪಂಚಾಯಿತಿಯಲ್ಲಿ, ಜಿಲ್ಲಾ ಗ್ರಾಮೀಣಾಭಿವೃದ್ಧಿ ಆಡಳಿತ ಅಡಿಯಲ್ಲಿ ಜಿಲ್ಲಾ ಗ್ರಾಮೀಣಾಭಿವೃದ್ಧಿ ಪ್ರಾಧಿಕಾರ ಕೋಶ ಹಾಗೂ ಜಿಲ್ಲಾ ಪಂಚಾಯಿತಿಗಳ ಸಿಬ್ಬಂದಿಗಳ ಮಾದರಿಯನ್ನು ನಿಗದಿಗೊಳಿಸಿ/ ಸೃಜಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಉಲ್ಲೇಖ: 10 ರಲ್ಲಿ ಜಿಲ್ಲಾ ಅಭಿವೃದ್ಧಿ ಕೋಶಗಳಲ್ಲಿನ ಹುದ್ದೆಗಳನ್ನು ಮರುಹಂಚಿಕೆ ಮಾಡಿ 93 ಹುದ್ದೆಗಳನ್ನು ರದ್ದು ಮಾಡಲು ಪ್ರಸ್ತಾಪಿಸಲಾಗಿದೆ ಈ ರೀತಿ ರದ್ದು ಪಡಿಸಲು ಪ್ರಸ್ತಾಪಿಸಿರುವ ಹುದ್ದೆಗಳಲ್ಲಿ 29 ಹುದ್ದೆಗಳನ್ನು ಸ್ವಉದ್ಯೋಗ ಕಾರ್ಯಕ್ರಮ ಶಾಖೆ 19 ಹುದ್ದೆಗಳು, ಜೈವಿಕ ಇಂಧನ ಕಾರ್ಯಕ್ರಮ ಶಾಖೆ 09 ಹುದ್ದೆಗಳು ರದ್ದಾಗುವ ಸಂಭವವಿರುವುದರಿಂದ ಹಾಗೂ 1 ನಿರ್ದೇಶಕರ ಹುದ್ದೆಗೆ ಮರು ಹಂಚಿಕೆ ಮಾಡಿ ತೀರ್ಮಾನಿಸಲಾಗಿದೆ.

ಮೇಲೆ ವಿವರಿಸಿರುವ ಸರ್ಕಾರದ ವಿವಿಧ ಆದೇಶಗಳಲ್ಲಿ ವರ್ಗಾಹಿಸಿರುವ ಅಧಿಕಾರಿಗಳನ್ನು/ ಸಿಬ್ಬಂದಿಗಳನ್ನು ಒಂದೇ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ತರುವ ಉದ್ದೇಶದಿಂದ ಈ ಕೆಳಕಂಡಂತೆ ಆದೇಶ ಹೊರಡಿಸಲು ಸರ್ಕಾರವು ನಿರ್ದರಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: RDP/52/GPS/2020 ದಿನಾಂಕ:26/03/2021.**

ಮೇಲೆ ಓದಲಾದ 1 ರಿಂದ 6 ರ ವರೆಗೆ ವಿವಿಧ ಸರ್ಕಾರಿ ಆದೇಶಗಳಲ್ಲಿ ಸೃಜಿಸಲಾಗಿರುವ ಒಟ್ಟು 84 ಹುದ್ದೆಗಳನ್ನು ಪಂಚಾಯತ್ ರಾಜ್ ಆಯುಕ್ತಾಲಯದ ಹುದ್ದೆಗಳೆಂದು ಪರಿಗಣಿಸಿ ಆದೇಶಿಸಿದೆ. (ಹುದ್ದೆಗಳ ವಿವರವನ್ನು ಅನುಬಂಧ-1, 2 ಹಾಗೂ 3 ರಲ್ಲಿ ಲಗತ್ತಿಸಿದೆ). ಸದರಿ ಹುದ್ದೆಗಳ ವೇತನ ಹಾಗೂ ಇತರೆ ಆಡಳಿತಾತ್ಮಕ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2515-00-001-0-01 ಪಂಚಾಯತ್ ರಾಜ್ ಆಯುಕ್ತರು ಆಡಳಿತ ವಿಭಾಗ (ನಿರ್ದೇಶನ ಮತ್ತು ಆಡಳಿತ) ಅಡಿಯಲ್ಲಿ ಭರಿಸುವುದು. ಈ ಆದೇಶವು 01.04.2021 ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1. ಮಹಾಲೇಖಪಾಲರು ಕರ್ನಾಟಕ

2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ & ಸಂಪನ್ಮೂಲಗಳು), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು.
4. ಎಲ್ಲಾ ನಿರ್ದೇಶಕರುಗಳು, ಪಂಚಾಯತ್ ರಾಜ್ ಆಯುಕ್ತಾಲಯ, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು.
5. ರಾಜ್ಯದ ಎಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಂಸ್ಥೆ, ಮೈಸೂರು.
7. ಜಂಟಿ ನಿರ್ದೇಶಕರು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಾಹಣ ಕೇಂದ್ರ, ಬೆಂಗಳೂರು.
9. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ. ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ನಿರ್ದೇಶಕು ಪಂ. ರಾಜ್ -1 & 2, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿ (ಆಡಳಿತ-1&2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
5. ವಿಶೇಷಾಧಿಕಾರಿ (ಜಿ.ಪಂ) ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಕರ್ನಾಟಕ ಪಂ. ರಾಜ್ ಆಯುಕ್ತಾಲಯ.
7. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.

*******************************

## ಸರ್ಕಾರಿ ಆದೇಶ ಸಂಖ್ಯೆ: RDP/52/GPS/2020 ದಿನಾಂಕ:26/03/2021 ಕ್ಕೆ ಅನುಬಂಧ-1

| ಕ್ರ.ಸಂ. | ಪದನಾಮ | ವೇತನ ಶ್ರೇಣಿ (ರೂ.) | ಹುದ್ದೆಗಳ ಸಂಖ್ಯೆ | ಹುದ್ದೆಗಳು ಭರ್ತಿ ಮಾಡುವ ವಿಧಾನ |
|---|---|---|---|---|
| 1 | ಆಯುಕ್ತರು | 78800-209200 | 1 | ಭಾರತೀಯ ಆಡಳಿತ ಸೇವೆ ವೃಂದದಿಂದ |
| 2 | ನಿರ್ದೇಶಕರು-1, 2 & ಅಭಿವೃದ್ಧಿ | 82000-117700 | 3 | ನಿರ್ದೇಶಕರು ಆಡಳಿತ-1, 2, ಅಭಿವೃದ್ಧಿ, ಪಿಎಂಐ ಹಾಗೂ ಉಪ ಕಾರ್ಯದರ್ಶಿ ವೃಂದಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉಪ ಕಾರ್ಯದರ್ಶಿ ಆಯ್ಕೆ ಶ್ರೇಣಿ ವೃಂದಕ್ಕಿಂತ ಕಡಿಮೆ ಇಲ್ಲದ ಅಧಿಕಾರಿಯನ್ನು ನೇಮಿಸುವುದು. |
| 3 | ನಿರ್ದೇಶಕರು-ಪಿಎಂಐ | 82000-117700 | 1 | |
| 4 | ಸರ್ಕಾರದ ಉಪ ಕಾರ್ಯದರ್ಶಿ | 74400-109600 | 1 | |
| 5 | ಉಪ ನಿರ್ದೇಶಕರು | 52650-97100 | 8 | ಉಪ ನಿರ್ದೇಶಕರ ಹುದ್ದೆಗಳನ್ನು ಗ್ರಾಅಪಂ. ರಾಜ್ ಇಲಾಖೆಯ ತಾ.ಪಂ. ಕಾರ್ಯ ನಿರ್ವಾಹಕ ಅಧಿಕಾರಿ/ ಸಹಾಯಕ ಕಾರ್ಯದರ್ಶಿ ಜಿ.ಪಂ. ರವರಿಂದ ನಿಯೋಜನೆ ಮೇಲೆ ನಿರ್ವಹಿಸಬಹುದು. |
| 6 | ಸಹಾಯಕ ನಿರ್ದೇಶಕರು | 43100-83900 | 2 | ಸಹಾಯಕ ನಿರ್ದೇಶಕರ ಹುದ್ದೆಗಳನ್ನು ತಾ.ಪಂ. ಸಹಾಯಕ ನಿರ್ದೇಶಕರನ್ನು ನಿಯೋಜನೆ ಮೇಲೆ ಭರ್ತಿಮಾಡುವುದು. |
| 7 | ಗೆಜೆಟೆಡ್ ಮ್ಯಾನೇಜರ್ | 40900-78200 | 4 | ಪತ್ರಾಂಕಿತ ವ್ಯವಸ್ಥಾಪಕರ ಹುದ್ದೆಗಳನ್ನು ಜಿ.ಪಂ. ತಾ.ಪಂ. ವ್ಯವಸ್ಥಾಪಕರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ನಿಯೋಜನೆ ಮೇಲೆ ಭರ್ತಿ ಮಾಡಬಹುದು. |
| 8 | ಅಧೀಕ್ಷಕರು/ ಶಿರಸ್ತೇದಾರರು/ ಸಹಾಯಕ ಸಾಂಕಿಕ ಅಧಿಕಾರಿ | 37900-70850 | 9 | ಅಧೀಕ್ಷಕರು/ ಶಿರಸ್ತೇದಾರರು/ ಸಹಾಯಕ ಸಾಂಖ್ಯಿಕ ಅಧಿಕಾರಿ ಹುದ್ದೆಗಳನ್ನು ಜಿ.ಪಂ. ತಾ.ಪಂ. ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ನಿಯೋಜನೆ ಮೇಲೆ ಭರ್ತಿ ಮಾಡಬಹುದು. |
| 9 | ಪ್ರಥಮ ದರ್ಜೆ ಸಹಾಯಕರು | 27650-52650 | 12 | ಜಿ. ಪಂ. ತಾ. ಪಂ. ಹಾಗೂ ಇತರೆ ಇಲಾಖೆಗಳಿಂದ ನಿಯೋಜನೆ/ ಹೊರಗುತ್ತಿಗೆ ಆಧಾರದ ಮೇಲೆ |
| 10 | ಶೀಘ್ರಲಿಪಿಗಾರರು | 27650-52650 | 6 | |
| 11 | ದ್ವಿತೀಯ ದರ್ಜೆ ಸಹಾಯಕರು | 21400-42000 | 9 | |
| 12 | ಬೆರಳಚ್ಚುಗಾರರು | 21400-42000 | 9 | |
| 13 | ವಾಹನ ಚಾಲಕರು | 21400-42000 | 8 | |
| 14 | ಅಟೆಂಡರ್/ ದಲಾಯತ್/ ಗ್ರೂಪ್-ಡಿ | 17000-28950 | 11 | |
| | ಒಟ್ಟು | | **84** | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಸರ್ಕಾರಿ ಆದೇಶ ಸಂಖ್ಯೆ: RDP/52/GPS/2020 ದಿನಾಂಕ:26/03/2021 ಕ್ಕೆ ಅನುಬಂಧ-2**

| ಕ್ರ.ಸಂ. | ಪದನಾಮ | ವೇತನ ಶ್ರೇಣಿ ರೂ. | ಹುದ್ದೆಗಳ ಸಂಖ್ಯೆ |
|---|---|---|---|
| 1 | ಆಯುಕ್ತರು | 78800-209200 | 1 |
| 2 | ನಿರ್ದೇಶಕರು (ಗ್ರಾಮೂಸೌ-1) | 90500-123300 | 1 |
| 3 | ನಿರ್ದೇಶಕರು (ಪಂ. ರಾಜ್-2) | 82000-117700 | 1 |
| 4 | ನಿರ್ದೇಶಕರು (ಗ್ರಾಮೀಣ ಸೌಕರ್ಯ-2) | 82000-117700 | 1 |
| 5 | ಸರ್ಕಾರದ ಉಪ ಕಾರ್ಯದರ್ಶಿ | 74400-109600 | 1 |
| 6 | ಉಪ ನಿರ್ದೇಶಕರು ಹಾಗೂ ಸರ್ಕಾರದ ಪದ ನಿಮಿತ್ತ ಅಧೀನ ಕಾರ್ಯದರ್ಶಿ | 52650-97100 | 2 |
| 7 | ಗೆಜೆಟೆಡ್ ಮ್ಯಾನೇಜರ್ | 40900-78200 | 3 |
| 8 | ಅಧೀಕ್ಷಕರು | 37900-70850 | 4 |
| 9 | ಪ್ರಥಮ ದರ್ಜೆ ಸಹಾಯಕರು | 27650-52650 | 7 |
| 10 | ಶೀಘ್ರಲಿಪಿಗಾರರು | 27650-52650 | 2 |
| 11 | ದ್ವಿತೀಯ ದರ್ಜೆ ಸಹಾಯಕರು | 21400-42000 | 5 |
| 12 | ಬೆರಳಚ್ಚುಗಾರರು | 21400-42000 | 6 |
| 13 | ವಾಹನ ಚಾಲಕರು | 21400-42000 | 6 |
| 14 | ಅಟೆಂಡರ್ | 19950-37900 | 1 |
| 15 | ದಲಾಯತ್ | 19000-28950 | 6 |
| 16 | ಉಪ ನಿರ್ದೇಶಕರು | 52650-97100 | 1 |
| 17 | ಪತ್ರಾಂಕಿತ ವ್ಯವಸ್ಥಾಪಕರು | 40900-78200 | 1 |
| 18 | ಪ್ರಥಮ ದರ್ಜೆ ಸಹಾಯಕರು | 27650-52650 | 2 |
| 19 | ಶೀಘ್ರಲಿಪಿಗಾರರು | 27650-52650 | 1 |
| 20 | ದ್ವಿತೀಯ ದರ್ಜೆ ಸಹಾಯಕರು | 21400-42000 | 1 |
| 21 | ಗ್ರೂಪ್-ಡಿ | 17000-28950 | 2 |
| | **ಒಟ್ಟು** | | **55** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಆಯುಕ್ತಾಲಯಕ್ಕೆ ಮರು ಹಂಚಿಕೆ ಮಾಡಿ ಸ್ಥಳಾಂತರಿಸಲಾದ ಜಿಲ್ಲೆಗಳಲ್ಲಿರುವ [illegible]

| ಸಂ. | ಪದನಾಮ | ವೇತನ ಶ್ರೇಣಿ ರೂ. | ಹುದ್ದೆಗಳ ಸಂಖ್ಯೆ |
|---|---|---|---|
| ಗ್ರಾಅಪ 469 ಗ್ರಾ[illegible]ಅ 2020 ದಿನಾಂಕ: 12.06.2020 ಆದೇಶದಲ್ಲಿ ಲೆಕ್ಕ ಶೀರ್ಷಿಕೆಗಳಾದ 2515-0[illegible]1-0-01 (ಸ್ವ-ಉದ್ಯೋಗ ಕ[illegible]ರ್ಯಕ್ರಮ) ಹಾಗೂ 2810-00-001-0-02 (ಜೈವಿಕ ಇಂಧನ) ಅಡಿಯಲ್ಲಿ ಮಂಜೂರಾಗಿರುವ 28 ಹುದ್ದೆಗಳನ್ನು ಪಂ. ರಾಜ್ ಆಯುಕ್ತಾಲಯಕ್ಕೆ ವರ್ಗಾಹಿಸಲಾಗಿದೆ. | | | |
| 1 | ನಿರ್ದೇಶಕರು ಪಿಎಂಐಯು | 82000-117700 | 1 |
| 1 | ಉಪ ನಿರ್ದೇಶಕರು | 52650-97100 | 3 |
| 2 | ಸಹಾಯಕ ನಿರ್ದೇಶಕರು | 43100-83900 | 2 |
| 3 | ಶಿರಸ್ತೇದಾರ್ | 37900-70850 | 1 |
| 4 | ಸಹಾಯಕ ಸಾಂಖಿಕ ಅಧಿಕಾರಿ | 37900-70850 | 3 |
| 5 | ಪ್ರಥಮ ದರ್ಜೆ ಸಹಾಯಕರು | 27650-52650 | 1 |
| 6 | ಶೀಘ್ರಲಿಪಿಗಾರರು | 27650-52650 | 2 |
| 7 | ದ್ವಿತೀಯ ದರ್ಜೆ ಸಹಾಯಕರು | 21400-42000 | 3 |
| 8 | ಬೆರಳಚ್ಚುಗಾರರು | 21400-42000 | 2 |
| 9 | ವಾಹನ ಚಾಲಕರು | 21400-42000 | 1 |
| 10 | ದಲಾಯತ್ | 19950-37900 | 1 |
| | ಒಟ್ಟು | | **20** |
| **ಲೆಕ್ಕ ಶೀರ್ಷಿಕೆ 2810-00-001-0-02 (ಜೈವಿಕ ಇಂಧನ) ಅಡಿಯಲ್ಲಿ ಮಂಜೂರಾಗಿರುವ 09 ಹುದ್ದೆಗಳನ್ನು ಪಂ. ರಾಜ್ ಆಯುಕ್ತಾಲಯಕ್ಕೆ ವರ್ಗಾಹಿಸಲಾಗಿದೆ.** | | | |
| 1 | ಉಪ ನಿರ್ದೇಶಕರು (ತಾಂತ್ರಿಕ) | 52650-97100 | 1 |
| 2 | ಉಪ ನಿರ್ದೇಶಕರು (ಜೈವಾನಿಲ) | 52650-97100 | 1 |
| 3 | ಅಧೀಕ್ಷಕರು | 37900-70850 | 1 |
| 4 | ಶೀಘ್ರಲಿಪಿಗಾರರು | 27650-52650 | 1 |
| 5 | ಪ್ರಥಮ ದರ್ಜೆ ಸಹಾಯಕರು | 27650-52650 | 2 |
| 6 | ಬೆರಳಚ್ಚುಗಾರರು | 21400-42000 | 1 |
| 7 | ವಾಹನ ಚಾಲಕರು | 21400-42000 | 1 |
| 8 | ಗ್ರೂಪ್ ಡಿ | 19950-37900 | 1 |
| | ಒಟ್ಟು | | **9** |
| | | ಒಟ್ಟು | **29** |

| **93 DRDA ಆಡಳಿತ ಯೋಜನೆ ಅಡಿಯಲ್ಲಿ ರದ್ದುಗೊಳಿ[illegible]ಸ್ಥಾಪಿಸಿರುವ ಹುದ್ದೆಗಳನ್ನು ಮರುಹಂಚಿಕೆ ಮಾಡುವುದು** | ಒಟ್ಟು |
|---|---|
| ರಾಮನಗರ ಜಿಲ್ಲೆಯ 1 EE ಹುದ್ದೆಯನ್ನು ರೂ 67550-104600 ವೇತನ ಶ್ರೇಣಿಯಿಂದ 82000-117700 ಉನ್ನತೀಕರೀಸಲಾಗಿದೆ. | 1 |
| ಬೆಂಗಳೂರು ಗ್ರಾಮಾಂತರ (TA/ AE) - **2** ಹುದ್ದೆಗಳು, ಚಿಕ್ಕಬಳ್ಳಾಪುರ (TA) **1** ಹುದ್ದೆ, ಈ ಹುದ್ದೆಗಳು 52650-97100 ವೇತನ ಶ್ರೇಣಿ ಹೊಂದಿರುತ್ತದೆ. | 3 |
| ಬೆಂಗಳೂರು ನಗರ ಜಿಲ್ಲೆಯ, ಸಹಾಯಕ ಅಭಿಯಂತರರು ಹಾಗೂ Technical Consultant **2** ಹುದ್ದೆಗಳು 43100-83900 ವೇತನ ಶ್ರೇಣಿ ಹೊಂದಿರುತ್ತದೆ | 2 |
| ದಾವಣಗೆರೆ ಜಿಲ್ಲೆಯಲ್ಲಿ Technical Asst **-1** ಹುದ್ದೆಯು 37900-70850 ವೇತನ ಶ್ರೇಣಿ ಹೊಂದಿರುತ್ತದೆ. | 1 |
| ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ Junior Eng. - **2** ಹುದ್ದೆಗಳು, ಕೊಪ್ಪಳ ಜಿಲೆಯ Junior Eng. - **1** ಹುದ್ದೆ, 37900-70850 ವೇತನ ಶ್ರೇಣಿ ಹೊಂದಿರುತ್ತದೆ. | 3 |
| ಕೊಪ್ಪಳ ಜಿಲ್ಲೆಯಲ್ಲಿ FDA **-1** ಹುದ್ದೆ, 27650-52650 ವೇತನ ಶ್ರೇಣಿ ಹೊಂದಿರುತ್ತದೆ | 1 |
| ಚಾಮರಾಜನಗರ ಜಿಲ್ಲೆಯಲ್ಲಿ Technical Ass: **-2** ಹುದ್ದೆಗಳು 27650-52650 ವೇತನ ಶ್ರೇಣಿ ಹೊಂದಿರುತ್ತದೆ | 2 |
| ಕೊಡಗು ಜಿಲ್ಲೆಯಲ್ಲಿ Juniour Eng **-2** ಹುದ್ದೆಗಳು, Project Eng-**1** ಹುದ್ದೆ, Technical Asst-**1** ಹುದ್ದೆ, ಹಾಗೂ ತುಮಕೂರು ಜಿಲ್ಲೆಯ JE/TA **-3** ಹುದ್ದೆಗಳು 33450-62600 ವೇತನ ಶ್ರೇಣಿ ಹೊಂದಿದ್ದು, ಇವುಗಳನ್ನು ಪ್ರಸ್ತಾಪಿತ 7 ಹುದ್ದೆಗಳಲ್ಲಿ 6 ಹುದ್ದೆಗಳ ವೇತನ ಶ್ರೇಣಿಗಳಾದ 21400-42000 ಹಾಗೂ 1 ಹುದ್ದೆಯ ವೇತನ ಶ್ರೇಣಿಯಾದ 19950-37900 ವೃಂದಕ್ಕೆ ನಿಮ್ನೀಕರೀಸಿ (Down grade) ಪರಿವರ್ತಿಸಬಹುದು. | 7 |
| | **20** |
| | |
| | 1 |
| ಹಾವೇರಿ ಜಿಲ್ಲೆಯ AAO **-1** ಹುದ್ದೆ, 52650-97100 ವೇತನ ಶ್ರೇಣಿ ಹೊಂದಿರುತ್ತದೆ. | 1 |
| ಕಲಬುರಗಿ ಜಿಲ್ಲೆಯ EE-**1** ಹುದ್ದೆ, 52650-97100 ವೇತನ ಶ್ರೇಣಿ ಹೊಂದಿರುತ್ತದೆ. | 1 |
| ಕೊಪ್ಪಳ ಜಿಲ್ಲೆಯ Technical Asst -**1** ಹುದ್ದೆ 37900-70850 ವೇತನ ಶ್ರೇಣಿ ಹೊಂದಿರುತ್ತದೆ. | 1 |
| ಚಾಮರಾಜನಗರ ಜಿಲ್ಲೆಯಲ್ಲಿ Technical Asst -**1** ಹುದ್ದೆ, 27650-52650 ವೇತನ ಶ್ರೇಣಿ ಹೊಂದಿರುತ್ತದೆ. | 1 |
| ಉತ್ತರ **ಕನ್ನಡ** ಹಾಗೂ ಮಂಡ್ಯ ಜಿಲ್ಲೆಯಲ್ಲಿನ Technical Asst -**5** ಹುದ್ದೆಗಳು 33450-62000 ವೇತನ ಶ್ರೇಣಿ ಹೊಂದಿರುತ್ತದೆ. **ಇವುಗಳಲ್ಲಿ ಪ್ರಸ್ತಾಪಿತ 2** ಹುದ್ದೆಗಳ **ವೇತನ ಶ್ರೇಣಿ** 27650-52650, **2** ಹುದ್ದೆಗಳ ವೇತನ **ಶ್ರೇಣಿ** 21400-42000 ಹಾಗೂ **1** ಹುದ್ದೆಯ **ವೇತನ ಶ್ರೇಣಿ** 19950-37900 **ಗಳಾಗಿದ್ದು** ಈ ವೇತನ ಶ್ರೇಣಿಯ ವೃಂದಗಳಿಗೆ ನಿಮ್ನೀಕರೀಸಿ (Down grade) ಪರಿವರ್ತಿಸಬಹುದು. | 5 |
| ಒಟ್ಟು | **9** |
| **ಒಟ್ಟು** | **29** |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ. ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.